**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No.**185/2020

**PW.** 12

**CW.** 21

**ಸಾಕ್ಷಿಯ ಹೆಸರು –ಅಶೋಕ ವಿ ಸಿ**

**ತಂದೆಯ ಹೆಸರು –ಲೇ ಚಿಕ್ಕಮಂಟಯ್ಯ**

**ವಯಸ್ಸು –41 ವರ್ಷಗಳು**

ದಿನಾಂಕ **12–12–2025** ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಪಿ ಐ , ಮಹಿಳಾ ಪೊಲೀಸ್ ಠಾಣೆ ಮೈಸೂರು**

**ವಾಸಸ್ಥಳ –ಮೈಸೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು ದಿಃ 20–06–2016 ರಿಂದ ದಿಃ 11–07–2019 ರವರೆಗೆ ಹೆಚ್ ಡಿ ಕೋಟೆ ಪೊಲೀಸ್ ಠಾಣೆಯಲ್ಲಿಪಿ ಎಸ್ ಐ ಆಗಿ ಸೇವೆ ಸಲ್ಲಿಸಿರುತ್ತೇನೆ.

ದಿಃ 20–06–2016 ರಂದು ಈ ಪ್ರಕರಣದ ಕಡತವನ್ನು ಚಾಸಾ–20 ರವರಿಂದ ಪಡೆದು ಪರಿಶೀಲಿಸಿ ತನಿಖೆ ಮುಂದುವರಿಸಿರುತ್ತೇನೆ. ದಿಃ 21–06–2016 ರಂದು ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು, ಅವರನ್ನು ವಿಚಾರಿಸಿ ಬಿಡುಗಡೆ ಮಾಡಿದ್ದೇನೆ.

ದಿ 24–06–2016 ರಂದು ಆರ್ ಎಫ್ ಎಸ್ ಎಲ್ ವರದಿಯನ್ನು ಪಡೆದು ಕಡತಕ್ಕೆ ಸೇರಿಸಿಕೊಂಡಿದ್ದೇನೆ. ಅದನ್ನು ಈಗಾಗಲೇ ನಿಪಿ–9 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ–9(ಎ) ಎಂದು ಗುರುತಿಸಲಾಯಿತು.

ದಿಃ 25-10-2016 ರಂದು ಮೃತ ದಾಸಶೆಟ್ಟಿಯ ಮರಣೋತ್ತರ ಪರೀಕ್ಷಾ ವರದಿಯನ್ನು ಪಡೆದು ಕಡತಕ್ಕೆ ಸೇರಿಸಿಕೊಂಡಿದ್ದೇನೆ. ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

ದಿಃ 02-11-2016 ರಂದು ಚಾಸಾ-15 ರವರಿಗೆ ಸಾವಿನ ಬಗ್ಗೆ ಅಭಿಪ್ರಾಯ ವರದಿ ಕೋರಿ ಮನವಿ ಸಲ್ಲಿಸಿದ್ದು, ದಿಃ 03-11-2016 ರಂದು ಚಾಸಾ-15 ರವರಿಂದ ಸಾವಿನ ಬಗ್ಗೆ ಅಂತಿಮ ಅಭಿಪ್ರಾಯ ವರದಿ ಪಡೆದು ಕಡತಕ್ಕೆ ಸೇರಿಸಿಕೊಂಡಿದ್ದೇನೆ. ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು. ಗಾಯಾಳು ಚಿಕಿತ್ಸೆ ಪಡೆದು ಮರಣ ಹೊಂದಿದ್ದು, ಅದರ ಆಧಾರದ ಮೇಲೆ ಸಾವಿನ ಬಗ್ಗೆ ಅಭಿಪ್ರಾಯ ವರದಿಯನ್ನು ನೀಡಿದ್ದಾರೆ.

ದಿಃ 03-05-2017 ರಂದು ಮೃತನ ಸಾವಿನ ಬಗ್ಗೆ ಹೆಚ್ಚಿನ ಅಭಿಪ್ರಾಯ ವರದಿ ಕೋರಿ ಮನವಿ ಸಲ್ಲಿಸಿದ್ದು, ದಿಃ 03-05-2017 ರಂದು ಚಾಸಾ-15 ರವರು ಮೃತನು ವಿಷ ಸೇವನೆ ಮಾಡಿ ಉಸಿರಾಟದ ತೊಂದರೆಯಿಂದ ಸಾವಿಗಿಡಾಗಿದ್ದಾನೆಂದು ಹೆಚ್ಚಿನ ಅಭಿಪ್ರಾಯ ವರದಿ ಪಡೆದು ಕಡತಕ್ಕೆ ಸೇರಿಸಿಕೊಂಡಿದ್ದೇನೆ. ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ದಿಃ 15-11-2017 ರಂದು ಕೃತ್ಯ ನಡೆದ ಮನೆ ಅಸೆಸ್ ಮೆಂಟ್ ಕಾಪಿ ಪಡೆದಿದ್ದು , ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಸಾಕ್ಷ್ಯು ಸಾಕ್ಷ್ಯಾದಾರಗಳು ಇದ್ದ ಕಾರಣ ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ.

**SC No.185/2020**
**PW.12**

**ಪಾಟೀಸವಾಲುಃ- ಆರೋಪಿತರ ಪರ ಶ್ರೀ ಕೆ ಸಿ ಬಿ ವಕೀಲರಿಂದಃ-**

ಹೆಚ್ ಡಿ ಕೋಟೆ ಪೊಲೀಸ್ ಠಾಣೆಯ Cr No. 88/2016 ರಲ್ಲಿ ನಾನೇ ತನಿಖಾಧಿಕಾರಿಯಾಗಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿ. Cr No. 88/2016 ರಲ್ಲಿ ಈ ಪ್ರಕರಣದ ಆರೋಪಿತರ ವಿರುದ್ಧ ಅದೇ ಸಮಯ ಮತ್ತು ದಿನಾಂಕದಂದು ಕೃತ್ಯ ನಡೆದ ಬಗ್ಗೆ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದ ದಿನಾಂಕ ಒಂದೇ ಆಗಿದ್ದು , ಸಮಯ ಬೇರೆ ಬೇರೆಯಾಗಿರುತ್ತದೆ ಎಂದು ಹೇಳುತ್ತಾರೆ. ಎರಡು ಪ್ರಕರಣಗಳ FIR ನಲ್ಲಿ ಕೃತ್ಯ ನಡೆದ ಸಮಯದಲ್ಲಿ ಒಂದೇ ಎಂದು ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. Cr No. 88/2016 ರಲ್ಲಿ ಯಾವ ಸಮಯದಲ್ಲಿ ಕೃತ್ಯ ನಡೆದಿದೆ ಎಂದು ನನಗೆ ಈಗ ಹೇಳಲು ಬರುವುದಿಲ್ಲ. Cr No. 87/2016 ರ ಪ್ರಕರಣದಲ್ಲಿ ನಾನೇ ತನಿಖಾಧಿಕಾರಿಯಾಗಿದ್ದೆ ಎಂದರೆ ಸರಿ. Cr No. 88/2016 ರಲ್ಲಿ ರ ಪ್ರಕರಣದಲ್ಲಿ ನಾನೇ ತನಿಖಾಧಿಕಾರಿಯಾಗಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದ ದೋಷಾರೋಪಣ ಪಟ್ಟಿಯ ದೃಢಿಕೃತ ನಕಲನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಪ್ರಕರಣದ Judgement ನ ದೃಢಿಕೃತ ನಕಲನ್ನು ನಿಡಿ-2 ಎಂದು ಗುರುತಿಸಲಾಯಿತು. Cr No. 87/2016 ರಲ್ಲಿ ರ ಪ್ರಕರಣದಲ್ಲಿ ನಾನೇ ತನಿಖಾಧಿಕಾರಿಯಾಗಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದ ದೋಷಾರೋಪಣ ಪಟ್ಟಿಯ ದೃಢಿಕೃತ ನಕಲನ್ನು ನಿಡಿ-3 ಎಂದು ಗುರುತಿಸಲಾಯಿತು. ದಾಖಲೆಗಳನ್ನು ನನ್ನ ಅನೂಕೂಲಕ್ಕೆ ತಕ್ಕಂತೆ ಸಂಗ್ರಹಿಸಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯಾದಾರಗಳು ಇಲ್ಲದಿದ್ದರೂ ಕೂಡ ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.